Sri M. RAJASEKHARA MURTHY.—The police are conducting the nvestagition ; they are interrogating some of the workers.

ಶ್ರೀ ಹಂಡಿ ಶಿವಣ್ಣ.—ಮಾಲು ಕಳುವಾದಾಗ ಕಾರ್ಖಾನೆಯಲ್ಲಿ ವಾಚ್‌ಮನ್ ಇರಲಿಲ್ಲವೇ ? ಕಾರ್ಖಾನೆ ಗೋಡೆ ಒಡೆದರೇ ಅಥವಾ ಬೀಗ ಮುರಿದರೇ ? ಅಥವ ಕಾರಿನಲ್ಲಿ ತೆಗೆದುಕೊಂಡು ಹೋದರೇ ? ಇದನ್ನು ವಿಚಾರಮಾಡಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ವರ್ಕರ್ಸ್ ಯಾರಿದ್ದಾರೆ ಅವರನ್ನು ಇಂಟರಾಗೇಟ್ ಮಾಡುತ್ತಿದ್ದಾರೆ ಮತ್ತು ಕಾರ್ಖಾನೆಯಲ್ಲಿ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ವಾಚ್‌ಮನ್ ಇದ್ದಾರೆ. ಅವನನ್ನು ಎನ್‌ಕ್ವೈರಿ ಮಾಡುತ್ತಿದ್ದಾರೆ. These are all matters of detail.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾತಂತ್ರ್ಯದ ದಿನ ವಿಸರ್ಜನ ಮಾಡಿದ ಸುಗಂಧ ದ್ರವಗಳ ಕಳುವು ಆಗಿರುವುದರಿಂದ ಈಗಿರುವ ಸರಕಾರದ ಸುಗಂಧ ಭಾಗ ಕೊಚ್ಚಿ ಹೋಗುತ್ತಿದೆ, ಮೈಸೂರಿನಲ್ಲಿರುವ ಕಾಂಗ್ರೆಸ್ ಸರಕಾರ ಸ್ವಲ್ಪ ತಲೆ ತಗ್ಗಿಸುವ ಹಾಗಾಗಿದೆ ಎಂದು ತಿಳಿಯಬಹುದೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಅವರು ಊಹೆ ಮಾಡುವುದು 15ನೆಯ ತಾರೀಖು ಕಳುವು ಆಗಿದೆ ಎಂದು. 14ನೆಯ ತಾರೀಖೇ ಏಕೆ ಆಗಿರಬಾರದು ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—27 ಕಿರೋಗ್ರಾಂ ಕಳುವಾಗಿತ್ತೆಂದು ಒಪ್ಪಿದ್ದೀರಿ ಈ ರೀತಿ ಕಳ್ಳತನ ಹಿಂದೆ ಆಗಿತ್ತೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಸೋಪಿನ ಕಾರ್ಖಾನೆ ಪ್ರಾರಂಭವಾಗಿ ಬಹಳ ವರ್ಷಗಳಾಗಿವೆ. ಯಾವ ವರ್ಷ ಎಂದು ಹೇಳಿದರೆ ತಿಳಿಸಬಹುದು.

ಉಪಾಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY

(but not taken up)

Information Centre at Nittur

483. Sri PRABHU RAO JAGADALE (Hulsoor).—

Will the Minister for Industries, Information and Publicity be pleased to state :—

(*a*) since when the proposal to construct an Information Centre at Nittur, District Bidar is pending consideration ;

(*b*) steps taken to expedite its construction ?

Sri M. RAJASEKHARA MURTHY (Minister for Industries, Information and Publicity).—

(*a*) There is no proposal to set up an Information Centre at Nittur, Bidar District.

(*b*) Does not arise in view of reply to (*a*),